ತನ್ನ ನಿರ್ಧಾರದ ಬಗ್ಗೆ ಪಶ್ಚಾತ್ತಾಪ ತಾಳುತ್ತಾಳೆ. ಈ ನಡವಳಿಕೆ ಕೂಡ ನಮ್ಮ ಸಮಾಜದ ರೂಢಿ–ಚೌಕಟ್ಟುಗಳಿಗೆ ಅನುಗುಣವಾಗಿಯೇ ಇದ್ದರೂ, ಚಿತ್ರದಲ್ಲೊಂದು ಉಲ್ಲಂಘನೆಯ ಧ್ವನಿ ಇರುವುದು ಗಮನಾರ್ಹ.

ಹೆಣ್ಣನ್ನು ಗರತಿಯಾಗಿ ನೋಡುವಲ್ಲಿ ಹಾಗೂ ಗಂಡಿನ ತೋಳಲ್ಲಿ ಆಕೆಗೆ ನೆಲೆ ಕಲ್ಪಿಸಿಕೊಡುವಲ್ಲಿ ನಮ್ಮ ಜನಪ್ರಿಯ ಸಿನಿಮಾಗಳಿಗೆ ಒಂದು ಬಗೆಯ ಸಂತೋಷ ಇರುವಂತಿದೆ. ನೋಡುಗರಿಗೆ ಕೂಡ ನಾಯಕಿಯ ಬಗ್ಗೆ 'ಅಯ್ಯೋ' ಎಂದು ಮರುಗುವುದು, ಕೊನೆಗೆ ಆಕೆಗೆ 'ಗರತಿತನ' ದೊರೆತಾಗ ಸಮಾಧಾನದ ನಿಟ್ಟುಸಿರುಬಿಡುವುದು ಅಭ್ಯಾಸವಾಗಿಬಿಟ್ಟಿದೆ. ಈ ಸಿದ್ಧಸೂತ್ರಕ್ಕೆ 'ಕಿರಗೂರಿನ ಗಯ್ಯಾಳಿಗಳು' ತದ್ವಿರುದ್ಧ. ಇಲ್ಲಿ 'ಗರತಿತನ' ಬಗ್ಗೆ ಉಪದೇಶಗಳಿಲ್ಲ. ಗಯ್ಯಾಳಿಗಳನ್ನು ಬದಲಿಸುವ ಪ್ರಯತ್ನವೂ ಇಲ್ಲ.

ಲಂಕೇಶರ 'ಅವ್ವ' ಕವಿತೆಯಂಥ ದಿಟ್ಟಹೆಣ್ಣುಗಳು ಗಯ್ಯಾಳಿಗಳು ಚಿತ್ರದಲ್ಲಿದ್ದಾರೆ. 'ಬನದ ಕರಡಿಯ ಹಾಗೆ / ಚಿಕ್ಕಮಕ್ಕಳ ಹೊತ್ತು / ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು. / ನೊಂದ ನಾಯಿಯ ಹಾಗೆ ಬೈದು ಗೊಣಗಿ, ಗುದ್ದಾಡಿದಳು; / ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ: / ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ. / ಈಕೆ ಉರಿದೆದ್ದಾಳು / ಮಗ ಕೆಟ್ಟರೆ. ಗಂಡ ಬೇರೆ ಕಡೆ ಹೋದಾಗ ಮಾತ್ರ'. ಲಂಕೇಶರು ಕಾಣಿಸುವ 'ಅವ್ವ'ನ ಈ ಚಿತ್ರಣ ಕಿರಗೂರಿನ ಹೆಣ್ಣುಮಕ್ಕಳದೂ ಹೌದು. ತಮ್ಮ ಗಂಡಂದಿರ ಹುಳುಕುಗಳನ್ನು ಅರಿತಿದ್ದೂ ಈ ಗಂಡುಜೀವದ ಯೋಗ್ಯತೆಯೇ ಇಷ್ಟು ಎನ್ನುವ ಉದಾರತೆಯಲ್ಲಿ ಅವರನ್ನು ಒಪ್ಪಿಕೊಳ್ಳುವ ಔದಾರ್ಯ ಈ ಹೆಣ್ಣುಜೀವಗಳದು. 'ಗಂಡಸರು ಮಕ್ಕಳಿದ್ದಂಗೆ. ಬೇಕು ಅಂದ್ರು ರಚ್ಚೆ ಹಿಡೀತಾವೆ. ಬೇಡ ಅಂದ್ರೂ ರಚ್ಚೆ ಹಿಡೀತಾವೆ. ನಾವೇ ಸಂಭಾಳಿಸಿಕೊಂಡು ಹೋಗ್ಬೇಕು' ಎನ್ನುವ ದಾನಮ್ಮನ ತಿಳಿವಳಿಕೆ ಚಿತ್ರದುದ್ದಕ್ಕೂ ಕಾಣಿಸುತ್ತದೆ.

ಹಾಗೆಂದು ಸುಮನ್ ಕೂಡ ಬದಲಾವಣೆಯ ಪೂರ್ಣ ದಿಟ್ಟತನ ತೋರಿಲ್ಲ. 'ಗೊಡ್ಡು ಹಸು' ಎಂದು ಗಂಡ ಕಾಳೇಗೌಡನ ತಿರಸ್ಕಾರಕ್ಕೆ ಒಳಗಾಗುವ ನಾಗಮ್ಮ, ಅಳಲೆಕಾಯಿ ಪಂಡಿತನ ಜೊತೆ ಓಡಿಹೋಗುವುದು ಅವಳ ಗೆಳತಿಯರಿಗೆ 'ಮುಖ ತೋರಿಸಲು ನಾಚುವ' ಅವಮಾನವಾಗಿ ಕಾಣಿಸುತ್ತದೆ. ನಾಗಮ್ಮನ ಗಂಡನಲ್ಲಿನ ಮಿಸ್ಟೇಕನ್ನು ಅರಿತೂ, ಗೆಳತಿಯ ನಡವಳಿಕೆಯ ಬಗ್ಗೆ ಮರುಗುವ ಗಯ್ಯಾಳಿಗಳ ಭಾವನೆಗಳ ಹಿನ್ನೆಲೆಯಲ್ಲಿ ರೂಢಿಗತ ಮನೋಭಾವವೇ ಇದೆ. ಆದರೆ, ನಾಗಮ್ಮ ಮನೆಗೆ ಮರಳಿದಾಗ ಅವಳ ಗೆಳತಿಯರು ನಡೆದುಕೊಳ್ಳುವ ರೀತಿ ಮನುಷ್ಯಸಹಜವಾಗಿದೆ. ಗಂಡ ನಿರಾಕರಿಸುವ ನಾಗಮ್ಮನನ್ನು ತಮ್ಮ ಮನೆಯಲ್ಲಿಟ್ಟುಕೊಳ್ಳಲು ಗೆಳತಿಯರು ಮುಂದಾಗುತ್ತಾರೆ. ಅವಳ ಕಾರಣದಿಂದಾಗಿಯೇ ನಡೆಯುವ ಪಂಚಾಯ್ತಿ, ಕೌಟುಂಬಿಕ ಚೌಕಟ್ಟನ್ನು ಮೀರಿ ಊರಿನಲ್ಲಿನ ಬದಲಾವಣೆಗೆ ಕಾರಣವಾಗುತ್ತದೆ.

'ಕಿರಗೂರಿನ ಗಯ್ಯಾಳಿಗಳು' ಚಿತ್ರದ ಮತ್ತೊಂದು ವಿಶೇಷ – ನವಿರುಹಾಸ್ಯ. ಗ್ರಾಮೀಣ ಬದುಕಿನ ದಾರುಣ ಸಂಗತಿಗಳು ಸಿನಿಮಾದ ಉದ್ದಕ್ಕೂ ಇದ್ದರೂ ಸಿನಿಮಾದ ಯಾವ ಭಾಗದಲ್ಲೂ ಉಸಿರುಗಟ್ಟುವ ಅನುಭವವಾಗುವುದಿಲ್ಲ. ಇದಕ್ಕೆ ಕಾರಣ, ಚಿತ್ರದಲ್ಲಿನ ಹೆಣ್ಣುಮಕ್ಕಳು. ತಮ್ಮ ಬದುಕಿನ ಸಂಕಟಗಳನ್ನೆಲ್ಲ ಸ್ನೇಹದಲ್ಲಿ, ನಗೆಸಾರ ಮಾತುಗಳಲ್ಲಿ ಕಳೆದುಬಿಡುವ ಉಮೇದು ಅವರದು. ತಂತಮ್ಮ ದೇಹಗಳು, ಗಂಡಸರ ನಖರಾಗಳು, ಅವರನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ತಾವು ಬಳಸಿದ ಪಟ್ಟುಗಳು – ಇವೆಲ್ಲ ಮಾತುಗಳಲ್ಲಿ ಬಂದುಹೋಗುತ್ತವೆ. ಈ ಹರಟೆಯಲ್ಲಿ ಬಾಯಿತುಂಬ ನಗುವ ಕಾಳಿಯಿದ್ದಂತೆ, ನಗುವಿಗೆ